ಜಿಲ್ಲೆಗೆ ಬ್ರಿಟಿಷರ ಕಾಲದಿಂದ ಶೇ.96, 97 ರಷ್ಟು ಅರಣ್ಯ ಇದ್ದಂತಹ ಕಾಲದಲ್ಲಿ Candor Privilege Act ಎನ್ನುವ Act ಅನ್ನು ನಮ್ಮ ಜಿಲ್ಲೆಗೆ ವಿಶೇಷವಾಗಿ ಕೊಟ್ಟಿದ್ದಾರೆ. ಇವತ್ತಿನತನಕ ಆ Candor Privilege Act ಎಲ್ಲಿಯೂ ಕೂಡ abolish ಆಗಿರುವಂತಹ ದಾಖಲೆಗಳು ಸಿಗುತ್ತಿಲ್ಲ. ಆದರೆ ಅದು ಜೀವಂತ ಇದೆ ಎನ್ನುವ ಮಾತನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಹಾಗಾಗಿ ಮಾನ್ಯ ಸಚಿವರಿಗೆ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ, ತಮ್ಮ ಉತ್ತರದಲ್ಲಿ, ಇವತ್ತಿಗೂ ಕೂಡ ರಾಜ್ಯದಲ್ಲಿ ಅತ್ಯಂತ ಹೆಚ್ಚು ಅರಣ್ಯ ಪ್ರದೇಶವಿರುವ ಅಂದರೆ ಶೇ.82% ಅರಣ್ಯ ಪ್ರದೇಶವಿರುವಂತಹ ನಮ್ಮ ಜಿಲ್ಲೆಗೆ ಅರಣ್ಯ ಇಲಾಖೆಯಲ್ಲಿ ಈ Candor Privilege Act ಜೀವಂತ ಇದೆಯೋ ಹೇಗೆ? ಇದೆ ಎಂದರೆ ಇದನ್ನು ಆಚರಣೆಗೆ ತರುವರಲ್ಲಿ ತೊಂದರೆ ಇರುವಂಥದ್ದು ಏನು ಎನ್ನುವುದನ್ನು ನಮಗೆ ತಿಳಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿ ತಾವು ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಶೂನ್ಯವೇಳೆ, ಮಾನ್ಯ ಕೆ.ಗೋಪಾಲ ಪೂಜಾರಿಯವರು ಮಾತನಾಡುವುದು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ:– ಕುಮಾರಿ ರತ್ನ ಕೊಠಾರಿ ಕಾಣೆಯಾಗಿರುವ ಪ್ರಕರಣದ ತನಿಖೆಯ ಬಗ್ಗೆ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):– ಮಾನ್ಯ ಅಧ್ಯಕ್ಷರೆ, ನನ್ನ ಬೈಂದೂರು ಮತದಾರ ಕ್ಷೇತ್ರ ವ್ಯಾಪ್ತಿಯ ಯಡ್ತರೆ ಗ್ರಾಮದ ಆಲಂದೂರು ಪ್ರದೇಶದ ನಿವಾಸಿ ಶಿರೂರು ಜೂನಿಯರ್ ಕಾಲೇಜಿನ ಪ್ರಥಮ ಪಿ.ಯು.ಸಿ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಕುಮಾರಿ ರತ್ನ ಕೊಠಾರಿ ಇವರು ದಿನಾಂಕ:09.07.2014 ರಂದು ಕಾಲೇಜಿನಿಂದ ಮನೆಗೆ ತೆರಳುವ ಸಂದರ್ಭದಲ್ಲಿ ಕಾಣೆಯಾಗಿರುತ್ತಾರೆ. ಆ ವಿದ್ಯಾರ್ಥಿನಿ ದಿನನಿತ್ಯ ಮನೆಯಿಂದ ಕಾಲೇಜಿಗೆ ನಡೆದಾಡುವ ಕಾಡುಪ್ರದೇಶದ ನಿರ್ಜನ ಸ್ಥಳದಲ್ಲಿ

ದಿನಾಂಕ:12.07.2014 ರಂದು ಶವವಾಗಿ ಪತ್ತೆಯಾಗಿದ್ದು ಈ ಪ್ರಕರಣ ಇವತ್ತು ಸಂಪೂರ್ಣ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಹಾಗೂ ಪರಿಹಾರ ಕೊಡಬೇಕು.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಕುಂದಾಪುರ ತಾಲೂಕು, ಶಿರೂರು ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ ಯಲ್ಲಿ ವ್ಯಾಸಂಗ ಮಾಡುತ್ತಿದ್ದ 17 ವರ್ಷದ ಹೆಣ್ಣು ಮಗಳು, ದಿನಾಂಕ 09/07/2014 ರಂದು ಅಪರಾಹ್ನ ಕಾಲೇಜಿನಿಂದ ಮನೆಗೆ ಹೊರಟವಳು ವಾಪಾಸು ಮನೆಗೆ ಬಾರದೇ ಇದ್ದು ಈಕೆಯ ನಡೆದುಕೊಂಡು ಬರುವ ಗುಡ್ಡಗಾಡು ಕಾಲು ದಾರಿಯಲ್ಲಿ ಯಾರೋ ಅಪರಿಚಿತರು ಅಪಹರಿಸಿರಬಹುದು ಇಲ್ಲವೇ ಮನೆಯ ಬಳಿ ಬರುವರೇ ನೀರಿನ ತೋಡಿನಲ್ಲಿ ದಾಟುವಾಗ ನೀರಿನಲ್ಲಿ ಬಿದ್ದು ಕೊಚ್ಚಿ ಹೋಗಿರಬಹುದು. ಇಲ್ಲವೇ ಎಲ್ಲಿಯೋ ಹೋಗಿರಬಹುದು ಎಂದು ರತ್ನಾಳ ತಂದೆ ನೀಡಿದ ದೂರಿನಂತೆ ಬೈಂದೂರು ಪೊಲೀಸ್ ಠಾಣೆಯಲ್ಲಿ ಅ.ಕ್ರ 151/14 ಕಲಂ 363 ಭಾ.ದಂ.ಸಂ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಈ ಕುರಿತಂತೆ ಮಾಹಿತಿ ದೊರೆತ ಕೂಡಲೇ ಪೊಲೀಸ್ ವೃತ್ತ ನಿರೀಕ್ಷಕರು ಬೈಂದೂರು ವೃತ್ತರವರು ಪೊಲೀಸ್ ಉಪನಿರೀಕ್ಷಕರು ಬೈಂದೂರು ಪೊಲೀಸ್ ಠಾಣೆಯವರೊಂದಿಗೆ ಆಲಂದೂರು, ಯಡ್ತರೆ, ಶಿರೂರು ಇತ್ಯಾದಿ ಪರಿಸರಗಳಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ಆಲಂದೂರಿನ ನೀರಿನ ತೋಡುಗಳಲ್ಲಿ, ಸಾರ್ವಜನಿಕರು, ಬಾತ್ಮೀದಾರರು, ನಾಪತ್ತೆಯಾದ ಹುಡುಗಿಯ ಪೋಷಕರು, ಸಂಬಂಧಿಕರೊಂದಿಗೆ ಹುಡುಕಾಡಿದ್ದು, ಎಲ್ಲಿಯೂ ಪತ್ತೆಗೆ ಉಪಯುಕ್ತವಾದ ಮಾಹಿತಿ ದೊರೆತಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ನಾಪತ್ತೆಯಾದ ಹುಡುಗಿಯ ಪೋಷಕರ ಒಪ್ಪಿಗೆಯ ಮೇರೆಗೆ ಆಕೆಯ ಭಾವ ಚಿತ್ರವನ್ನು ದೈನಂದಿನ ಪತ್ರಿಕೆ, ಟಿ.ವಿ

ಮಾಧ್ಯಮಗಳಲ್ಲಿ ಪ್ರಕಟಿಸಿ ಆಕೆಯ ಪತ್ತೆಯ ಬಗ್ಗೆ ಪ್ರಯತ್ನಿಸಲಾಗಿರುತ್ತದೆ. ಅಲ್ಲದೇ ಕರ ಪತ್ರಗಳನ್ನು ಮುದ್ರಿಸಿ ಸಾರ್ವಜನಿಕ ಸ್ಥಳಗಳಾದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಶಿರೂರು, ಬೈಂದೂರು, ಬೀಜೂರು ರೈಲ್ವೆ ನಿಲ್ದಾಣಗಳಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ.

ಪೊಲೀಸ್ ವೃತ್ತ ನಿರೀಕ್ಷಕರು ಬೈಂದೂರು ವೃತ್ತ ಮತ್ತು ಉಪ ಅಧೀಕ್ಷಕರು, ಕುಂದಾಪುರರವರು ಕಾಣೆಯಾದ ಹುಡುಗಿ ವ್ಯಾಸಂಗ ಮಾಡುತ್ತಿದ್ದ ಶಿರೂರು ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ಉಪನ್ಯಾಸಕರಲ್ಲಿ ಮತ್ತು ಸಹಪಾಠಿಗಳನ್ನು ವಿಚಾರ ವಿನಿಮಯ ಮಾಡಿ ನಂತರ ಅಪಹೃತಳ ಮನೆಗೆ ಭೇಟಿ ನೀಡಿ ಆಕೆಯ ಪೋಷಕರಿಂದ ಮಾಹಿತಿ ಪಡೆದುಕೊಂಡಿದ್ದು, ಕಾಣೆಯಾದ ಬಾಲಕಿ ಕೊನೆಯ ಬಾರಿಗೆ ಕಾಣಿಸಿಕೊಂಡ ಸ್ಥಳಕ್ಕೆ ಪರಿಶೀಲನೆ ನಡೆಸಿ ನಡೆಸಿರುತ್ತಾರೆ.

ದಿನಾಂಕ 12/07/2014 ರಂದು ಬೆಳಗ್ಗಿನ ಜಾವ ಕುಂದಾಪುರ ತಾಲೂಕು ಶಿರೂರು ಗ್ರಾಮದ ಸಾವಂತಗುಡ್ಡೆ ಎಂಬಲ್ಲಿ ಒಂದು ಮೃತ ದೇಹವು ಇರುವುದಾಗಿ ಬೈಂದೂರು ಠಾಣಾ ಪಿ.ಎಸ್.ಐ ರವರಿಗೆ ಬಂದ ಮಾಹಿತಿಯಂತೆ, ಪಿ.ಎಸ್.ಐ ರವರು ಸಾವಂತಗುಡ್ಡೆಗೆ ಹೋದಾಗ ಅಲ್ಲಿ ಹುಡುಗಿಯ ಮೃತ ದೇಹವಿದ್ದು, ಸದರಿ ಸಮಯ ನಾಪತ್ತೆಯಾದ ಹುಡುಗಿಯ ತಂದೆ ಹಾಗೂ ಇತರ ಸಾರ್ವಜನಿಕರು ಶಿರೂರು ಗ್ರಾಮದ ಸಾವಂತ ಗುಡ್ಡೆಯಲ್ಲಿ ಹಾಜರಿದ್ದು ಸದರಿ ಮೃತ ದೇಹವನ್ನು ಅವರ ಸಮಕ್ಷಮ ನೋಡಲಾಗಿ ಕೆಂಪು ಬಣ್ಣ ಚೂಡಿದಾರ, ಸ್ಕೂಲ್ ಬ್ಯಾಗ್ ಇದ್ದು ಸದರಿ ಮೃತ ದೇಹವು ತನ್ನ ಮಗಳಾದ್ದಾಗಿರುವುದಾಗಿ ಗುರುತಿಸಿ, ಆಕೆಯ ಮರಣದಲ್ಲಿ ಸಂಶಯವಿದ್ದು ಯಾರೋ ನನ್ನ ಮಗಳನ್ನು ಕೊಲೆ ಮಾಡಿದ್ದು ಈ ಬಗ್ಗೆ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೋರಿದ್ದು, ಸದರಿ ಪ್ರಕರಣದಲ್ಲಿ ಕಲಂ 363 ಐಪಿಸಿಯೊಂದಿಗೆ ಕಲಂ 302 ಐಪಿಸಿಯನ್ನು ಅಳವಡಿಸಿ ವಿಶೇಷ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿ ಪ್ರಕರಣವನ್ನು ಪೊಲೀಸ್ ವೃತ್ತ ನಿರೀಕ್ಷಕರು ಬೈಂದೂರು ವೃತ್ತರವರಿಗೆ ಮುಂದಿನ ತನಿಖೆಯ ಬಗ್ಗೆ ಹಸ್ತಾಂತರಿಸಿರುತ್ತಾರೆ.

ಸದರಿ ಘಟನೆಯ ಮಾಹಿತಿ ದೊರೆತ ಕೂಡಲೆ ಪೊಲೀಸ್ ಅದೀಕ್ಷಕರು ಉಡುಪಿ ಜಿಲ್ಲೆ ಉಡುಪಿರವರು ಸದರಿ ಸ್ಥಳಕ್ಕೆ ಭೇಟಿ ನೀಡಿ ಮೃತ ದೇಹವನ್ನು ನೋಡಿ ಸ್ಥಳದಲ್ಲಿ ಹಾಜರಿದ್ದ ಹುಡುಗಿಯ ತಂದೆ ಹಾಗೂ ಅಣ್ಣನನ್ನು ವಿಚಾರಿಸಿ ಮಾಹಿತಿ ಪಡೆದುಕೊಂಡಿದ್ದು ನಂತರ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯ ವಿಧಿ ವಿಜ್ಞಾನ ತಜ್ಞರು, ಶ್ವಾನ ದಳವನ್ನು ಬರಮಾಡಿಸಿಕೊಂಡಿರುತ್ತಾರೆ. ಆ ಸಮಯ ಸ್ಥಳದಲ್ಲಿ ಬಾರಿ ಮಳೆಯಾಗುತ್ತಿದ್ದ ಪರಿಣಾಮ ಶ್ವಾನ ದಳಕ್ಕೆ ಯಾವುದೇ ಉಪಯುಕ್ತ ಕುರುಹು ಲಭಿಸಿರುವುದಿಲ್ಲ. ನಂತರ ಸದರಿ ಸ್ಥಳಕ್ಕೆ ಆಗಮಿಸಿದ ವಿಧಿ ವಿಜ್ಞಾನ ತಜ್ಞರು ಮೃತ ದೇಹ ಹಾಗೂ ಸ್ಥಳವನ್ನು ಪರಿಶೀಲನೆ ನಡೆಸಿ, ಮರಣದ ಬಗ್ಗೆ ಮರಣೋತ್ತರ ಶವ ಪರೀಕ್ಷೆಗಾಗಿ ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಗೆ ಮೃತ ದೇಹವನ್ನು ತರುವಂತೆ ಸೂಚಿಸಿದ ಮೇರೆಗೆ, ಮೃತ ದೇಹವನ್ನು ಕೆಎಮ್‌ಸಿ ಆಸ್ಪತ್ರೆಗೆ ಸಾಗಿಸಲಾಗಿರುತ್ತದೆ. ಕೆ.ಎಂ.ಸಿ ಆಸ್ಪತ್ರೆಯ ನುರಿತ ವಿಧಿ ವಿಜ್ಞಾನ ತಜ್ಞರಿಂದ ಮರಣೋತ್ತರ ಶವ ಪರೀಕ್ಷೆಯನ್ನು ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಯ ಶವಗಾರದಲ್ಲಿ ನಡೆಸಿದ್ದು ಮೃತ ದೇಹದ ಒಳ ಮತ್ತು ಹೊರ ನೋಟಕ್ಕೆ ಯಾವುದೇ ಗಾಯಗಳು ಹಾಗೂ ಅತ್ಯಾಚಾರವಾದ ಬಗ್ಗೆ ಕುರುಹುಗಳು ಕಂಡು ಬರುವುದಿಲ್ಲ. ಮರಣದ ಬಗ್ಗೆ ಖಚಿತ ಅಭಿಪ್ರಾಯವನ್ನು ನೀಡಲು ವಿಸ್ರವನ್ನು ತೆಗೆದಿರಿಸಿ ಬಳಿಕ ಮರಣದ ಬಗ್ಗೆ ನಿಖರವಾದ ಅಬಿಪ್ರಾಯ ನೀಡುವುದಾಗಿ ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ಕೆಲವು ಮಹತ್ವದ ಸುಳಿವುಗಳನ್ನು ಮತ್ತು ಘಟನೆಯನ್ನು ನೋಡಿರಬಹುದಾದ ಸಾಕ್ಷಿದಾರರ ಬಗ್ಗೆ ತನಿಖೆಯನ್ನು ಚುರುಕುಗೊಳಿಸಲಾಗಿದ್ದು, ಮತ್ತು ಈ ಪ್ರಕರಣದ ತನಿಖೆಗಾಗಿ 4 ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿದೆ. ಉಡುಪಿ ಜಿಲ್ಲೆಯ ಪೊಲೀಸ್ ಅಧೀಕ್ಷಕರು ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರೂ ಸಹಾ ಪರಿಶೀಲನೆ ಮಾಡಿ ತನಿಖೆಯ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ. ಪಶ್ಚಿಮ ವಲಯ ಪೊಲೀಸ್ ಮಹಾ ನಿರೀಕ್ಷಕರನ್ನು ಸರ್ಕಾರದ ವತಿಯಿಂದ ಈ

ಪ್ರಕರಣದ ಬಗ್ಗೆ ಈ ಪ್ರಕರಣವನ್ನು ಭೇದಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು.

ಹೆಚ್‌ಡಿ 101 ಸದನ 2014(2)

(ಕೆ.ಜೆ. ಜಾರ್ಜ್)

ಗೃಹ ಸಚಿವರು

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು):– ಮಾನ್ಯ ಅಧ್ಯಕ್ಷರೆ, ಇದೊಂದು ನಿಜವಾಗಿಯೂ ದುರದೃಷ್ಟಕರವಾದ ಪ್ರಕರಣ. ಪಾಪ ವಿದ್ಯಾರ್ಥಿನಿ ದಿನಾಂಕ 09.07.2014 ರಂದು ಕಾಲೇಜಿನಿಂದ ವಾಪಸ್ಸು ಬರುವಾಗ ಗುಡ್ಡಗಾಡು ಪ್ರದೇಶದಲ್ಲಿ ನಾಪತ್ತೆಯಾಗಿದ್ದಾರೆ ಎಂದು ಅವರ ತಂದೆಯವರು compliant ಕೊಡುತ್ತಾರೆ. ಆದರೆ ದಿನಾಂಕ 12.07.2014 ರಂದು ಅದೇ ಪಕ್ಕದಲ್ಲಿ ಕುಂದಾಪುರ ತಾಲ್ಲೂಕು ಶಿರೂರು ಗ್ರಾಮದ ಸಾವಂತಗುಡ್ಡೆ ಎಂಬಲ್ಲಿ ಮೃತ ದೇಹ ಪತ್ತೆಯಾಗುತ್ತದೆ. ಅದು ಅವರದೇ ಮೃತ ದೇಹ ಎಂದು ಅವರ ಅಣ್ಣ ಹಾಗೂ ತಂದೆಯವರು ಸಾಬೀತು ಮಾಡುತ್ತಾರೆ. S.P, Additional S.P ಮತ್ತು 4 Special Squad ಅನ್ನು ಮಾಡಿದ್ದೇವೆ. ನಿನ್ನೆ ತಾನೇ ನಮ್ಮ I.G ಯವರು ಇಲ್ಲಿ ಇದ್ದರು ಅವರನ್ನೂ ಸಹ ಅಲ್ಲಿ ಕಳುಹಿಸಿಕೊಟ್ಟಿದ್ದೇನೆ. ನಮ್ಮ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರು ಸಹ ಅಲ್ಲಿ ಹೋಗಿ ಬಂದಿದ್ದಾರೆ. ನಿಜವಾಗಿಯೂ ಇದೊಂದು ದುರ್ಘಟನೆ. ಈ ವಿಚಾರದಲ್ಲಿ ಈಗಾಗಲೇ ನಾವು ಪತ್ತೆಹಚ್ಚುವುದಕ್ಕೆ ಸಾಕಷ್ಟು ಶುರು ಮಾಡಿದ್ದೇವೆ. Hospital ನಲ್ಲಿ postmortem ಸಮೇತ ಆಗಿದೆ. ಎಲ್ಲಾ ವಿಚಾರದಲ್ಲಿಯೂ ನಾವು ಅದನ್ನು ಪತ್ತೆಹಚ್ಚುತ್ತೇವೆ. ಅದರ ಕಾರಣ ಕಂಡುಹಿಡಿಯುತ್ತೇವೆ ಮತ್ತೆ ಇವತ್ತು ಅವರು compensation ಕೇಳುತ್ತಿದ್ದಾರೆ, ನಾನು ಸರ್ಕಾರದ ವತಿಯಿಂದ ಮೂರು ಲಕ್ಷ ರೂ.ಗಳ compensation ಕೊಡುವಂತಹ ಭರವಸೆಯನ್ನು ಕೊಡುತ್ತಿದ್ದೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಕೆ.ಎಂ. ಶಿವಲಿಂಗೇಗೌಡರು ಹಾಜರಿಲ್ಲ. ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರು ಹಾಜರಿಲ್ಲ. ಮಾನ್ಯ ಬಿ.ಆರ್. ಪಾಟೀಲ್‌ರವರು ಮಾತನಾಡುವುದು.

2) ವಿಷಯ:– ಆಳಂದ ತಾಲ್ಲೂಕು ಗಡಿಭಾಗದ ಖಜೂರಿ ಹೋಬಳಿ ಕೇಂದ್ರದಲ್ಲಿ ಜೂನಿಯರ್ ಕಾಲೇಜು (P.U. college) ಒದಗಿಸುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ಮಾನ್ಯ ಅಧ್ಯಕ್ಷರೆ ಸಂಬಂಧಪಟ್ಟ ಸಚಿವರು ಹಾಜರಿಲ್ಲ.

ಅಧ್ಯಕ್ಷರು:– ಅವರು ಇದ್ದಾಗಲೇ ತಾವು ಕೇಳುತ್ತೀರಾ?

ಶ್ರೀ ಬಿ.ಆರ್. ಪಾಟೀಲ್:– ಏಕೆಂದರೆ ಪರಿಹಾರ ಸಮೇತ...

ಅಧ್ಯಕ್ಷರು:– ತಾವು ಈಗ ಕೇಳುವುದಕ್ಕೆ ಆಗುತ್ತದೆಯೋ ಇಲ್ಲವೋ?

ಶ್ರೀ ಬಿ.ಆರ್. ಪಾಟೀಲ್:– ಕೇಳುತ್ತೇನೆ. ಸರ್ಕಾರ ಗಮನಿಸಿದರೆ ಕೇಳುತ್ತೇನೆ.

ಅಧ್ಯಕ್ಷರು:– ಕೇಳಿ.

ಶ್ರೀ ಬಿ.ಆರ್. ಪಾಟೀಲ್:– ಕರ್ನಾಟಕ ಏಕೀಕರಣ ಆದ ಮೇಲೆ ನಮ್ಮ ಗಡಿಭಾಗದಲ್ಲಿ ಖಜೂರಿ ಒಂದು ಕಂದಾಯ ಹೋಬಳಿ ಕೇಂದ್ರ ಆಗಿದ್ದು, ಇಲ್ಲಿಯವರೆಗೆ ಅವರಿಗೆ ಒಂದು ಜೂನಿಯರ್ ಕಾಲೇಜು ಇಲ್ಲ. ಎಂಟು ಗ್ರಾಮದವರು ಮಹಾಜನ್ ಕಮಿಷನ್ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗಬೇಕಾದವರು. ಆದರೂ ಅದು ನಿರ್ಣಯ ಆಗದಿದ್ದಕ್ಕೆ ನಮ್ಮ ಜೊತೆ ಉಳಿದಿದ್ದಾರೆ. ಅವರು ಏನು ಹೇಳುತ್ತಾರೆಂದರೆ ನಾವು ಕನ್ನಡ ಕಲಿಯಲು ತಯಾರಿದ್ದೇವೆ. ಮೊನ್ನೆ ಪ್ರಕರಣವಾದಾಗ ತಾವು ಖಜೂರಿ ಹೋಬಳಿ ಕೇಂದ್ರಕ್ಕೆ ಬಂದಿದ್ದೀರಿ. ನಾವು ಕನ್ನೆ ಕಲಿಯಲು ತಯಾರಿದ್ದೇವೆ. ನಮಗೆ ಅನುಕೂಲ ಮಾಡಿಕೊಡುವುದಿಲ್ಲ. ನಾವು ಹೇಗೆ ಕನ್ನಡ ಕಲಿಯುವುದು ಎಂದು ಕೇಳುತ್ತಾರೆ.